# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001
ದೂ:+91–80–2226 0017; +91–80–2226 7470; +91–80–2226 1047
ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:ಎಸ್‌ಹೆಚ್‌ಕ್ಯೂ/ತ.1/ರೋ.ಸ್ಕೌ.ರೇ.ಲೀ.ಮೂ/ಮು.ತ.ಶಿ–06/2025–26/1382 ದಿನಾಂಕ:24.10.2025

ಜಿಲ್ಲಾ ಕಾರ್ಯದರ್ಶಿಯವರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ.

ಮಾನ್ಯರೆ,

ವಿಷಯ:– ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜುಗಳ ಉಪನ್ಯಾಸಕರುಗಳಿಗೆ ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ **ಮೂಲ ತರಬೇತಿ ಶಿಬಿರವನ್ನು** ಸಂಘಟಿಸಿರುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜುಗಳ ಉಪನ್ಯಾಸಕರುಗಳಿಗೆ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ ಮೂಲ ತರಬೇತಿ ಶಿಬಿರವನ್ನು ಸಂಘಟಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

| | |
|---|---|
| **ತರಬೇತಿ** | **ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರ** |
| **ದಿನಾಂಕ** | **18.11.2025 ರಿಂದ 24.11.2025 ರವರೆಗೆ** |
| **ಸ್ಥಳ** | **ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.** |
| ವರದಿ ಮಾಡುವ ದಿನಾಂಕ | 18.11.2025 ರಂದು 9.00 ಗಂಟೆಗೆ |
| ಬಿಡುಗಡೆ ದಿನಾಂಕ | 24.11.2025ರ ಸಂಜೆ 4 ಗಂಟೆಗೆ |
| ಶಿಬಿರದ ಶುಲ್ಕ | 1. ಊಟೋಪಚಾರದ ಶುಲ್ಕ ದಿನ ಒಂದಕ್ಕೆ ರೂ. 150/–ರಂತೆ 7 ದಿನಕ್ಕೆ --- ರೂ. 1050/–<br>2. ಶಿಬಿರ ನೊಂದಾವಣಿ ಶುಲ್ಕ --- ರೂ. 300/–<br>3. ಶಿಬಿರದ ಅಭಿವೃದ್ಧಿ ಶುಲ್ಕ --- ರೂ. 150/–<br>4. ಸ್ಕೌಟ್/ಗೈಡ್ ಮಾಸಪತ್ರಿಕೆ ಶುಲ್ಕ --- ರೂ. 200/–<br>5. ರೋವರ್/ ರೇಂಜರ್ ಘಟಕಕ್ಕೆ ವಾರ್ಷಿಕ --- ರೂ. 194/–<br>**ಪ್ರತಿಯೊಬ್ಬರಿಗೆ ಒಟ್ಟು ರೂ. 1894/–** |
| ಸಮವಸ್ತ್ರ | ಶಿಬಿರ ಸ್ಥಳದಲ್ಲಿ ಸಮವಸ್ತ್ರವನ್ನು ಖರೀದಿಸುವುದು. ಸಮವಸ್ತ್ರದ ಬಗ್ಗೆ ಅಂದಾಜು ರೂ.2000/–ಗಳನ್ನು ರೋವರ್/ರೇಂಜರ್ ನಿಧಿಯಿಂದ ಭರಿಸುವುದು ಅಥವಾ ತಮ್ಮ ಜಿಲ್ಲಾ ಸಂಸ್ಥೆಯ ಸಂಘಟಕರನ್ನು ಭೇಟಿ ಮಾಡಿ ಅವರ ಮಾರ್ಗದರ್ಶನದಲ್ಲಿಯೂ ಸಮವಸ್ತ್ರದ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದಾಗಿದೆ. ಪ್ರತಿಯೊಬ್ಬರಿಗೂ ಸಮವಸ್ತ್ರ ಕಡ್ಡಾಯವಾಗಿದೆ. |

ಪು.ತಿ.ನೋ

| | |
|---|---|
| ಭಾಗವಹಿಸುವ ರೋವರ್ಸ್/ರೇಂಜರ್ಸ್ ಶಿಕ್ಷಕರು ಈ ಲಿಂಕ್ ಮೂಲಕ ನೊಂದಾವಣಿ ಮಾಡಿಕೊಳ್ಳುವುದು. | https://zfrmz.in/eRSwstIx0PNMcszRGLXZ |
| ರೋವರಿಂಗ್/ರೇಂಜರಿಂಗ್ (ಪುಸ್ತಕಗಳು) ಸಾಹಿತ್ಯ | ಶಿಬಿರ ಕೇಂದ್ರದಲ್ಲಿ ಖರೀದಿಸುವುದು. |
| ಪ್ರಯಾಣ ವೆಚ್ಚ | ಆಯಾಯ ಕಾಲೇಜುಗಳ ರೋವರ್-ರೇಂಜರ್ ನಿಧಿಯಿಂದ ಭರಿಸುವುದು. |
| ವಸತಿ | ರಾಜ್ಯ ಸಂಸ್ಥೆಯ ವತಿಯಿಂದ ವಸತಿ ವ್ಯವಸ್ಥೆ ಏರ್ಪಡಿಸಿದೆ. |
| ತರಬೇಕಾದ ವಸ್ತುಗಳು | ಬದಲಾಯಿಸಲು ಉಡುಪು, ಬೆಚ್ಚಿಗಿನ ಹಾಸಿಗೆ, ತಟ್ಟೆ, ಲೋಟ, 200 ಪೇಜ್‌ನ ನೋಟ್ ಪುಸ್ತಕ, ಲೇಖನಿ ಸಾಮಗ್ರಿಗಳು, ಡ್ರಾಯಿಂಗ್ ಶೀಟ್, ಸ್ಕೆಚ್‌ಪೆನ್ ಮೂರು ಮೀಟರ್ ಬಿಳಿ ಕಾಟನ್ ಹಗ್ಗ (ಅರ್ಧ ಇಂಚ್ ದಪ್ಪ), ಸೂಜಿ ದಾರ, ಛತ್ರಿ, ಟಾರ್ಚ್, ಮಸ್ಕಿಟೋ ಕಾಯಿಲ್ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು ಮತ್ತು ಔಷಧಿ.<br>**ಸಮವಸ್ತ್ರ:**<br>**ರೋವರ್ ಸ್ಕೌಟ್ ಲೀಡರ್**: ಸಮವಸ್ತ್ರಕ್ಕೆ ಸ್ಟೀಲ್ ಗ್ರೇ ಕಲರ್‌ನ ಅರ್ಧತೋಳಿನ ಭುಜಪಟ್ಟಿ, ಮುಚ್ಚಳವಿರುವ ಎರಡು ಜೇಬುಳ್ಳ ಷರ್ಟ್, ನೇವಿ ಬ್ಲೂ ಕಲರ್ ಪ್ಯಾಂಟ್ (ಪೋಲಿಸರ ಸಮವಸ್ತ್ರದಂತೆ) ಸ್ಕಾರ್ಫ್, ಓಗಲ್, ಬ್ಲೂ ಬೆರೆಟ್ ಟೋಪಿ, ಕರಿ ಬಣ್ಣದ ಲೇಸ್ ಇರುವ ಷೂ, ಕರಿ ಬಣ್ಣದ ಕಾಲು ಚೀಲ, ಬೂದು ಬಣ್ಣದ ನೈಲಾನ್ ಬೆಲ್ಟ್.<br>**ರೇಂಜರ್ ಲೀಡರ್**: ಸಮವಸ್ತ್ರಕ್ಕೆ (ಬಿಳಿ ಬಣ್ಣದ ಅರ್ಧತೋಳಿನ ಭುಜಪಟ್ಟಿ ಇರುವ ಮತ್ತು ಮುಚ್ಚಳವಿರುವ ಎರಡು ಜೇಬುಳ್ಳ ಷರ್ಟ, ಕಂದು ಬಣ್ಣ ನೈಲನ್ ಬೆಲ್ಟ್, ನೀಲಿ ಬಣ್ಣದ ಸೀರೆ ತೆಳುವಲ್ಲದ), ಕಪ್ಪು ಪೆಟಿಕೋಟ್, ಸ್ಕಾರ್ಫ್ ಓಗಲ್, ಕಪ್ಪು ಷೂ, ಕಂದು ಬಣ್ಣದ ಕಾಲು ಚೀಲ (camel colour) |
| ಜಿಲ್ಲೆಗೆ ನಿಗದಿಪಡಿಸಿರುವ ಸಂಖ್ಯೆ (ಕೋಟಾ) | ಪ್ರತಿ ಜಿಲ್ಲೆಯಿಂದ 10 ಉಪನ್ಯಾಸಕರು – 10 ಉಪನ್ಯಾಸಕಿಯವರು |
| ಭಾಗವಹಿಸುವ ಜಿಲ್ಲೆಗಳು | **ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕಾರವಾರ, ಕೊಪ್ಪಳ, ಶಿವಮೊಗ್ಗ, ಶಿರಸಿ, ವಿಜಯಪುರ, ವಿಜಯನಗರ** |
| ನೊಂದಾಯಿಸಲು ಕಡೆಯ ದಿನಾಂಕ | **10.11.2025ರ** ಒಳಗಾಗಿ ಉಪನ್ಯಾಸಕರುಗಳ ಪಟ್ಟಿಯನ್ನು ರಾಜ್ಯ ಸಂಸ್ಥೆಗೆ ಕಳುಹಿಸಲು ವಿನಂತಿಸಿದೆ. |
| ಸಂಪರ್ಕಿಸಬೇಕಾದ ಮೊ.ಸಂಖ್ಯೆ | ಕಛೇರಿ ದೂರವಾಣಿ ಸಂಖ್ಯೆ: 080-22267470, 080-2226 0017<br>ಶ್ರೀ. ಎಲ್.ಟಿ. ಲೋಕೇಶ್, ಸಹ ಕಾರ್ಯದರ್ಶಿ, ರೋವರ್ ಇನ್‌ಚಾರ್ಜ್ – 9449886981<br>ಶ್ರೀ. ನಾಗೇಶ್ ಆರ್. ಶಿವಪುರ್, ರಾ.ತ.ಆ(ಸ್ಕೌ) – 9731854272<br>ಶ್ರೀಮತಿ. ಕೆ.ವಿ. ಶಾಮಲ, ರಾ.ತ.ಆ(ಗೈ) – 9980237570<br>ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎಎಸ್‌ಒಸಿ(ಗೈ), ರೇಂಜರ್ ಇನ್ ಚಾರ್ಜ್ – 7259115730 |

ಪು.ತಿ.ನೋ

**ಶಿಬಿರದ ಶುಲ್ಕ ರೂ. 1894/- ಮತ್ತು ಸಮವಸ್ತ್ರದ ಶುಲ್ಕ ರೂ. 2000/- ಹಾಗೂ ಹೋಗಿ ಬರುವ ಪ್ರಯಾಣದ ವೆಚ್ಚವನ್ನು ಆಯಾ ಕಾಲೇಜಿನ ರೋವರ್-ರೇಂಜರ್ ಚಾಲ್ತಿ ನಿಧಿ ಅಥವಾ ಸಂಚಿತ ನಿಧಿಯಿಂದ ಸರ್ಕಾರಿ ಆದೇಶದಂತೆ ಭರಿಸಲು ಅವಕಾಶವಿರುತ್ತದೆ.** ತಾವು ಈಗಾಗಲೇ ರೋವರ್-ರೇಂಜರ್ ಶಿಕ್ಷಣದ ತರಬೇತಿಯನ್ನು ಪಡೆಯಲಾರದ ಪದವಿ & ಪದವಿ ಪೂರ್ವ ಕಾಲೇಜುಗಳಿಂದ ಉಪನ್ಯಾಸಕರನ್ನು-ಉಪನ್ಯಾಸಕಿಯರುಗಳನ್ನು ನಿಯೋಜಿಸುವಲ್ಲಿ ತಮ್ಮ ಜಿಲ್ಲೆಯ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಹಾಗೂ ಪ್ರಾಂಶುಪಾಲರು, ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜು ಪ್ರಾಂಶುಪಾಲರುಗಳನ್ನು ಸಂಪರ್ಕಿಸಿ ಸೂಕ್ತ ಅನುಮತಿ ಪಡೆದು ಅವರುಗಳನ್ನು ಮೇಲ್ಕಂಡ ಶಿಬಿರದಲ್ಲಿ ಸಕಾಲದಲ್ಲಿ ಭಾಗವಹಿಸುವಲ್ಲಿ ತ್ವರಿತ ಕ್ರಮ ಕೈಗೊಳ್ಳುವಂತೆ ಕೋರಿದೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ರಾಜ್ಯ ಮುಖ್ಯ ಆಯುಕ್ತರಿಂದ**
**ಅನುಮೋದಿಸಲ್ಪಟ್ಟಿದೆ**

**ಪ್ರತಿಯನ್ನು ಗೌರವದೊಂದಿಗೆ ಈ ಕೆಳಕಂಡವರಿಗೆ ಕಳುಹಿಸುತ್ತಾ ಅರ್ಹ ಉಪನ್ಯಾಸಕ/ಉಪನ್ಯಾಸಕಿಯರನ್ನು ತಮ್ಮ ಜಿಲ್ಲಾ ಸಂಸ್ಥೆಯಿಂದ ನಿಯೋಜಿಸಿ, ಸದರಿ ಶಿಬಿರಕ್ಕೆ ಸಕಾಲದಲ್ಲಿ ಹಾಜರಾಗುವಲ್ಲಿ ಅನುಮತಿಯ ಆದೇಶ ನೀಡಿ ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇನೆ.**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ
2. ಕಾಲೇಜು ಶಿಕ್ಷಣ ವಿಭಾಗ, ಆಯುಕ್ತರು

**ಪ್ರತಿಯನ್ನು ಮಾಹಿತಿಗಾಗಿ ಹಾಗು ಮುಂದಿನ ಸೂಕ್ತ ಕ್ರಮಕ್ಕಾಗಿ:**

1. ಮಾನ್ಯ ರಾಜ್ಯ ಆಯುಕ್ತರು(ಸ್ಕೌಟ್ಸ್)(ಗೈಡ್ಸ್)(ವ.ಸಂ), ಭಾ.ಸ್ಕೌ & ಗೈ, ಕರ್ನಾಟಕ
2. ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ & ಗೈ, ಕರ್ನಾಟಕ
3. ರಾಜ್ಯ ನೋಡಲ್ ಅಧಿಕಾರಿಗಳು(ರೋವರ್ಸ್-ರೇಂಜರ್ಸ್ ವಿಭಾಗ) ಭಾ.ಸ್ಕೌ&ಗೈ, ಕರ್ನಾಟಕ
4. ಎಲ್ಲಾ ಜಿಲ್ಲಾ ತರಬೇತಿ ಆಯುಕ್ತರುಗಳಿಗೆ(ಸ್ಕೌ/ಗೈ), ಭಾ.ಸ್ಕೌ&ಗೈ, ಕರ್ನಾಟಕ
5. ಸಹಾಯಕ ರಾಜ್ಯ ಸಂಘಟನಾ ಆಯುಕ್ತರು/ ಜಿಲ್ಲಾ ಸಂಘಟಕರು/ ಎಸ್.ಜಿ.ವಿ/ಎಸ್.ಜಿ.ಎರವರಿಗೆ.
6. ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
7. ಲೆಕ್ಕ ಪತ್ರ ವಿಭಾಗ.
8. ಕಛೇರಿ ಟಿಪ್ಪಣಿ